work, that matter is being investigated now. ಅದಾದಮೇಲೆ ಕಾರ್ಯಕ್ರಮ ಹಾಕುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಂಟಪ ಟೈಪ್ ಬ್ರಿಡ್ಜಸನ್ನು ಎತ್ತಿನಗಾಡಿಗಳು ಹೋಗುವುದಕ್ಕಿಂತ ಆಗಿನ ಕಾಲದಲ್ಲಿ ಮಾಡಿದ್ದು. ಈಗ ಅವು ಒಡೆದುಹೋದರೆ ರಿಪೇರಿ ಮಾಡಿ ಎಂದರೆ ನೀರಾವರಿ ಇಲಾಖೆಯವರು ಅದು ತಮಗೆ ಬರುವುದಿಲ್ಲ ಬರೀ ಚಾನಲ್ ನಮಗೆ ಬರುತ್ತದೆ. ಬ್ರಿಡ್ಜಸ್ ಕಮ್ಯುನಿಕೇಷನ್‌ವರಿಗೆ ಬರುತ್ತದೆ. ಹೀಗಾಗಿ ಯಾರೂ ರಿಪೇರಿ ಮಾಡಿರದ ವಿಪರ್ಯಾಸ ಸ್ಥಿತಿ ಉಂಟಾಗಿದೆ. ಎರಡೂ ಜವಾಬ್ದಾರಿಯನ್ನು ಒಬ್ಬರೇ ತೆಗೆದುಕೊಳ್ಳಬೇಕಲ್ಲವೇ?

ಶ್ರೀ ಎಸ್. ಬಂಗಾರಪ್ಪ : ಒಟ್ಟು There are about 28 number of mantap-type projects along CDS channels. of these, 14 required to be reconstructed. They are in dilapidated condition. ಮಾನ್ಯ ಸದಸ್ಯರಿಯವರು ಕೊನೆ ಪಕ್ಷ ಎತ್ತಿನಗಾಡಿಗಳು ಮತ್ತೊಂದು ಹೋಗುವುದಕ್ಕೆ ತೊಂದರೆಯಾಗಿದೆಯೆಂದು ಹೇಳುತ್ತಿದ್ದಾರೆ. ನಾವು ಅದಕ್ಕೆ ಹಣ ಕೊಟ್ಟು ಮೊದಲು ಎತ್ತಿನಗಾಡಿಗಳು ಮತ್ತೊಂದು ಹೋಗುವುದಕ್ಕೆ ಏನು ತೊಂದರೆಯಾಗಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸಕ್ಕೆ ನಾವು ಆರ್ಡರ್ ಮಾಡಿ ಕಳಿಸಿಕೊಡುತ್ತೇನೆ.

ಮೈಸೂರು ಮಿನರಲ್ಸ್ ನಿಯಮಿತಕ್ಕೆ ಟೈರೆಕ್ಸ್ ಲೋಡರ್ ಸರಬರಾಜು

979 - ಶ್ರೀ ಎಂ. ರಾಮಪ್ಪ (ಬಳ್ಳಾರಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡೆವಲಪ್‌ಮೆಂಟ್ ಇನ್‌ಸೆಂಟಿವ್ ಸ್ಕೀಂನಲ್ಲಿ ಎಂ.ಎಂ.ಟಿ.ಸಿ. ಯಿಂದ ಮೈಸೂರು ಮಿನರಲ್ಸ್ ಕಂಪನಿಗೆ ಟೈರೆಕ್ಸ್ ಲೋಡರ್ ಸರಬರಾಜು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಸರಬರಾಜು ಮಾಡಲಾಯಿತು ಮತ್ತು ಅದರ ದರ ತಿಳಿಸುವುದು.

ಇ) ಈ ರೀತಿ ಸರಬರಾಜು ಮಾಡಿದ ಟೈರೆಕ್ಸ್ ಲೋಡರ್‌ನ್ನು ಅಳವಡಿಸಿಕೊಳ್ಳಲಾಗಿದೆಯೇ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು):

ಅ) ಐರನ್ ಓರ್ ಡೆವಲಪ್‌ಮೆಂಟ್ ಇನ್‌ಸೆಂಟೀವ್ ಸ್ಕೀಂನಲ್ಲಿನ ನಿಧಿಯಿಂದ ಮೈಸೂರು ಮಿನರಲ್ಸ್ ಕಂಪನಿಯು ಟೈರೆಕ್ಸ್ ಲೋಡರ್ ಅನ್ನು ಖರೀದಿಸಿದೆ.

ಆ) ಇದನ್ನು ದಿನಾಂಕ 19.1.91ರಂದು ಖರೀದಿಸಲಾಯಿತು. ಇದರ ಒಟ್ಟು ದರ ರೂ. 16,03,964-00 ಲಕ್ಷಗಳು.

ಇ) ಈ ರೀತಿ ಕೊಂಡಂತಹ ಟೈರೆಕ್ಸ್ ಲೋಡರ್ ಅನ್ನು ಇನ್ನು ಅಳವಡಿಸಿಲ್ಲ.

ಶ್ರೀ ಎಂ. ರಾಮಪ್ಪ : ಸ್ವಾಮಿ, ಮೈಸೂರು ಮಿನರಲ್ಸ್ ಕಂಪೆನಿಯಲ್ಲಿ ಟೈರೆಕ್ಸ್ ಲೋಡರನ್ನು ಕೊಂಡು ಎರಡು ಮೂರು ತಿಂಗಳಾಯಿತು. ಇನ್ನೂ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಅದನ್ನು ಕೆಲಸದಲ್ಲಿ ತೊಡಗಿಸದಿರುವುದಕ್ಕೆ ಕಾರಣಗಳೇನು? ಅದಕ್ಕೆ ಕೊಟ್ಟಿರುವ ಬಡ್ಡಿ ಲೆಕ್ಕ ಹಾಕಿದರೆ ಬಹಳ ಆಗುತ್ತದೆ. ಅದನ್ನೇನು ಚಿಂದಕ್ಕೆ ಇಟ್ಟುಕೊಂಡಿದ್ದೀರಾ?

ಶ್ರೀ ಎಂ.ಎಲ್. ಉಸ್ತಾದ್ : ಎಂಎಂಟಿಸಿ ಮತಿಯಿಂದ ಕಬ್ಬಿಣದ ಅಭಿವೃದ್ಧಿಗಾಗಿ ಕೊಡಹೂಡಿರುವ ಅಭಿವೃದ್ಧಿ ಪ್ರೋತ್ಸಾಹದ ಹಣದಿಂದ ಅದಿರು, 19.9.90ರಂದು ಒಂದು ಟೈರೆಕ್ಸ್ ಲೋಡರನ್ನು 16,03,464 ರೂಪಾಯಿಗಳಿಗೆ ಕೊಳ್ಳಲಾಯಿತು. ಈ ಟೈರೆಕ್ಸ್ ಲೋಡರ್ ಸಂಸ್ಥೆಗೆ ಸೇರಿದ್ದು ಅದನ್ನು ಸುಬ್ಬರಾಯನ ಹಳ್ಳಿ ಕಬ್ಬಿಣ ಗಣಿ ಪ್ರದೇಶದಲ್ಲಿ ಉಪಯೋಗಿಸಲು ಉದ್ದೇಶಿಸಲಾಗಿದೆ. ಈ ಟೈರೆಕ್ಸ್ ಲೋಡರನ್ನು ಲೋಡ್

ಮಾಡಲು ಉಪಯೋಗಿಸಲು ಒಂದು ಸಾಧನವಾಗಿದೆ. ಲೋಡ್ ಮಾಡಲು ಬೇಕಾದ ಟಿಪ್ಪರ್‌ಗಳನ್ನು ಕೊಂಡನಂತರ ಇದನ್ನು ಅಭಿವೃದ್ಧಿಗಾಗಿ ಅಳವಡಿಸಿಕೊಳ್ಳಬಹುದು. ಅದಕ್ಕೆ ಈಗಾಗಲೇ ನಾವು ಆರ್ಡರ್ಸ್ ಮಾಡಿದ್ದೇವೆ. ಅದು ಬಂದ ನಂತರ ಇದನ್ನು ಉಪಯೋಗಿಸಿಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ : ಆಮೇಲೆ ನಿಮ್ಮಲ್ಲಿ ಎಷ್ಟು ಲಾರಿಗಳಿವೆ ಎಂದು ಲೆಕ್ಕ ಇದೆಯೇ? ಎಷ್ಟು ಐಡ್ಲಾಗಿ ಬಿದ್ದಿವೆ ಎಂದು ಲೆಕ್ಕ ಇದೆಯೇ? ಅವು ಏನಾಗಿದೆ ಎಂದು ಗೊತ್ತಿಲ್ಲ ಏಕೆಂದರೆ, ನಿಮ್ಮ ಅಧಿಕಾರಿಗಳು ಎಂಎಂಎಲ್‌ಗೆ ಕೋಟಿಗಟ್ಟಲೆ ನಷ್ಟ ಮಾಡುತ್ತಿದ್ದಾರೆ. ಎಷ್ಟೋ ಲಾರಿಗಳು ಕೆಲವು ಮೈನ್‌ಗಳಲ್ಲಿ ಸುಮ್ಮನೆ ನಿಂತಿವೆ. ಅವನ್ನು ಈಚೆಗೆ ತೆಗೆಸಿ ಕೆಲಸ ಮಾಡುವುದಕ್ಕೆ ಏರ್ಪಾಡು ಮಾಡಿದ್ದರೆ ಆಗುತ್ತಿತ್ತಲ್ಲ. ಇದು ಏಕೆ ವಿಳಂಬವಾಗಿದೆಯೆಂದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ.ಎಲ್. ಉಸ್ತಾದ್ : ಎಷ್ಟು ಲಾರಿ ಕೆಟ್ಟು ನಿಂತಿವೆ ಎಂದು ವಿವರ ನನ್ನಲ್ಲಿ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ವಿವರವಾಗಿ ಉತ್ತರ ಒದಗಿಸುತ್ತೇನೆ.

ಶ್ರೀ ಎಂ. ರಾಮಪ್ಪ : ಮೈನ್‌ಗಳಲ್ಲಿ ಐಡ್ಲಾಗಿರುವ ಲಾರಿಗಳನ್ನು ತರಿಸಿ ಇಲ್ಲಿ ಕೆಲಸ ಮಾಡಿಸಬೇಕಾಗಿತ್ತು. ಆ ಸಂಸ್ಥೆಯಲ್ಲಿರುವ ಐಎಎಸ್ ಅಧಿಕಾರಿಗಳು ಏನು ಮಾಡುತ್ತಿದ್ದಾರೆ., ಇದನ್ನೆಲ್ಲ ಅವರು ಮಾಡಬೇಕು. ಸುಮ್ಮನೆ ಗುಮಾಸ್ತನ ಕೆಲಸ ಮಾಡುವುದಕ್ಕೆ ಅವರು ಕುಳಿತಿಲ್ಲ. ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಈ ರೀತಿ ಐಡ್ಲಾಗಿ ಬಿದ್ದಿರುವ ವಸ್ತು ಸಾಮಾನುಗಳಿಂದ ನಷ್ಟ ಸಂಸ್ಥೆಗೆ ಎಷ್ಟಾಗುತ್ತಿದೆ ಎಂಬ ವಿವರ ನಮಗೆ ಬೇಕು. ಎಷ್ಟು ಐಡ್ಲು ಆಗಿ ಬಿದ್ದಿದೆ ಎಂಬ ವಿವರ ಕೂಡ ಬೇಕು.

ಶ್ರೀ ಎಂ.ಎಲ್. ಉಸ್ತಾದ್ : ಇದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಘಟಪ್ರಭಾ ನದಿಯ ಭಾಗವನ್ನು ನಾಲೆಯನ್ನಾಗಿ ಪರಿವರ್ತಿಸಿರುವುದು

219 - ಶ್ರೀ ಉಮೇಶ್ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಹಿಡಕಲ್ ಅಣೆಕಟ್ಟಿನಿಂದ ಗೋಕಾಕ್ ಜಲಪಾತದವರೆಗೆ ಘಟಪ್ರಭಾ ನದಿಯನ್ನು ಕಾಲುವೆ ಎಂದು ಯಾವ ದಿನಾಂಕದಿಂದ ಮಾರ್ಪಡಿಸಲಾಗಿದೆ.?*

ಆ) *ಘಟಪ್ರಭಾ ನದಿಯನ್ನು ಕಾಲುವೆ ಎಂದು ಸರ್ಕಾರ ಘೋಷಿಸಿದ್ದಲ್ಲಿ ಹುಕ್ಕೇರಿ ತಾಲ್ಲೂಕಿನ ರೈತರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ನದಿಯನ್ನು ದೇಶದಲ್ಲಿ ಪ್ರಥಮ ಬಾರಿಗೆ ಕಾಲುವೆ ಎಂದು ಘೋಷಿಸಿದ್ದನ್ನು ರದ್ದುಪಡಿಸಲಾಗುವುದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ದಿನಾಂಕ 29.1.1980ರಂದು ಸದರಿ ನದಿಯ ಭಾಗವನ್ನು ಕಾಲುವೆ ಎಂದು ಘೋಷಿಸುವ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ) ನದಿಯ ಸದರಿ ಭಾಗದಿಂದ ನೀರಾವರಿಗಾಗಿ ನೀರೆತ್ತಲು ಪರವಾನಗಿ ಕೋರಿ ರೈತರಿಂದ ಕೋರಿಕೆ ಬಂದಿರುವುದು ನಿಜ.

ಇ) ಅಧಿಸೂಚನೆಯನ್ನು ರದ್ದುಪಡಿಸುವ ವಿಚಾರ ಸದ್ಯಕ್ಕೆ ಇಲ್ಲ.